**O.S. NO. 386/2008**
**PW.1**

ದಿಃ 24-07-2018 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿ ಪರ ಕೆ.ಎಸ್.ಬಿ ವಕೀಲರವರಿಂದ;

ದಾವಾ ಆಸ್ತಿ ಹಿರಿಯರ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ಮೂಲ ಪುರುಷ ಬಸಪ್ಪಾ ಜೀವಂತ ಇರುವಾಗ ಅವರ ಹಿರಿಯ ಮಗ ಈರಪ್ಪಾ ಮನೆಯ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದ ಎಂದರೆ ಸರಿ. ಸದರಿ ಈರಪ್ಪನು ತನ್ನ ಹಿರಿಯ ಮಗನಾದ ದುಂಡಪ್ಪನ ಹೆಸರನ್ನು ಮಾತ್ರ ಉತಾರದಲ್ಲಿ ಹಚ್ಚಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಮನೆಯ ವ್ಯವಹಾರವನ್ನು ದುಂಡಪ್ಪ ನೋಡಿಕೊಳ್ಳುತ್ತಿದ್ದನು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿ ನಂ. 2 ಶಿವಲಿಂಗಪ್ಪನಿಗೆ ಯಾವುದೇ ಹಕ್ಕು ಪ್ರಾಪ್ತಿ ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾವು ಮತ್ತು ಪ್ರತಿವಾದಿಯರು ಒಟ್ಟಾಗಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿ ಅಲ್ಲ ಮತ್ತು ಅದರಲ್ಲಿ ನಮ್ಮ ಯಾವುದೇ ಹಕ್ಕು ಇಲ್ಲ ಮತ್ತು ಸಮಯಕ ಕಬ್ಜೆ ಮತ್ತು ಸಾಗು ಮಾಡುತ್ತಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ. 2 ಮಾತ್ರ ಕಬ್ಜೆಯಲ್ಲಿದ್ದಾರೆಂದರೆ ಸರಿಯಲ್ಲ. ಪ್ರತಿವಾದಿ ನಂ. 2 ಶಿವಲಿಂಗಪ್ಪ ಇವರು ಮಾಲೀಕರು ಮತ್ತು ಕಬ್ಜೆಯಲ್ಲಿದ್ದಾರೆ ಎಂದು ಖಾತ್ರಿ ಪಡಿಸಿಕೊಂಡು 6 ನೇ ಪ್ರತಿವಾದಿ ದಾವಾ ಆಸ್ತಿಯ ನಂ. 282/3 ನ್ನು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಖರೀದಿ ದಿನಾಂಕದಿಂದ ಇಂದಿನವರೆಗೂ 6 ನೇ ಪ್ರತಿವಾದಿ ಕಬ್ಜೆಯಲ್ಲಿದ್ದಾರೆ ಎಂದರೆ ಸರಿಯಲ್ಲ.

ದಾವಾ ಆಸ್ತಿ ನಂ. 282/3 ಒಣ ಬೇಸಾಯ ಆಸ್ತಿ ಎಂದರೆ ಸರಿ. ಅಲ್ಲಿ ಸರಿಯಾದ ಬೆಳೆ ಬರುವುದಿಲ್ಲ ಎಂದರೆ ಸರಿಯಲ್ಲ. ಬಸಪ್ಪನ ಮಗ ಈರಪ್ಪಾ 1945 ರಲ್ಲಿ ತೀರಿಕೊಂಡಿದ್ದಾರೆ ಎಂದರೆ ಇಸ್ವಿ ಗೊತ್ತಿಲ್ಲ. ದಾವಾ ಆಸ್ತಿ ನಂ. 282/3 ಒಣ ಬೇಸಾಯ ಆಸ್ತಿ ಆಗಿದ್ದರಿಂದ ದುಂಡಪ್ಪ, ಬಸವಂತಪ್ಪ, ಬಸವಣ್ಣೆಪ್ಪ ಇವರಿಗೆ ಮನೆ ನಡೆಸುವುದು ಕಷ್ಟವಾಗಿತ್ತು ಎಂದರೆ ಸರಿಯಲ್ಲ. ಅದಕ್ಕಾಗಿ ಸದರಿ ವ್ಯಕ್ತಿಗಳು ವಾಟ್ನಿ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ವಾಟ್ನಿ ಆದ ನಂತರ ಸದರಿ ವ್ಯಕ್ತಿಗಳು ಮದನಭಾಂವಿ ಮತ್ತು ಅಡಿಬಟ್ಟಿ ಊರುಗಳಿಗೆ ಹೋಗಿ ವಾಸಿಸುತ್ತಿದ್ದರು ಎಂದರೆ ಸರಿಯಲ್ಲ. ಬಸವಣ್ಣೆಪ್ಪ ಇವರ ಹೆಂಡತಿಯ ತವರು ಮನೆ ಮದನಭಾಂವಿ ಮತ್ತು ಅವರು ಅಲ್ಲಿಯೇ ಹೋಗಿ ವಾಸ ಮಾಡುತ್ತಿದ್ದರು ಎಂದರೆ ಸರಿ. ಬಸವಂತಪ್ಪನ ಇವರ ಹೆಂಡತಿಯ ತವರು ಮನೆ ಅಡಿಬಟ್ಟಿ ಮತ್ತು ಅವರು ಅಲ್ಲಿಯೇ ಹೋಗಿ ವಾಸ ಮಾಡುತ್ತಿದ್ದರು ಎಂದರೆ ಸರಿ.

O.S. NO. 386/2008

ನಾನು ಅಡಿಬಟ್ಟಿಯಲ್ಲಿ ವಾಸ ಮಾಡುತ್ತೇವೆ. ಪ್ರತಿವಾದಿ ನಂ. 3 ರಿಂದ 5 ಮದನಭಾಂವಿಯಲ್ಲಿರುತ್ತಾರೆ. ನನ್ನ ಗಂಡ ಈ ಕೇಸಿನ ವಾದಿ ಅಡಿಬಟ್ಟಿಯಲ್ಲಿ ಹುಟ್ಟಿದ್ದಾರೆ. ಪ್ರತಿವಾದಿ ನಂ. 3 ರಿಂದ 5 ಮದನಭಾಂವಿಯಲ್ಲಿ ಹುಟ್ಟಿದ್ದಾರೆ. ಬಸವಂತಪ್ಪ ಮತ್ತು ಬಸವಣ್ಣೆಪ್ಪ ರವರು ತಮ್ಮ ಹೆಂಡತಿ ಊರಿಗೆ ಹೋಗಿ ಪ್ರತ್ಯೇಕ ಆಸ್ತಿ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ತಂದೆ ದುಂಡಪ್ಪನಿಗೆ ಬಸವಂತಪ್ಪ ಮತ್ತು ಬಸವಣ್ಣೆಪ್ಪ ರವರು ಹಕ್ಕು ಬಿಟ್ಟು ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ

ದಾವಾ ಆಸ್ತಿಗೆ 1965 ರಲ್ಲಿ ಬಸವಂತಪ್ಪ ಮತ್ತು ಬಸವಣ್ಣೆಪ್ಪ ಹಾಗೂ ದುಂಡಪ್ಪನವರ ನಡುವೆ ವಾಟ್ನಿ ಆಗಿರುತ್ತದೆ ಎಂದರೆ ಸರಿಯಲ್ಲ. ಅದರಂತೆ ಡಾಯರಿ ನಂ. 6998 ರಂತೆ ಹೆಸರು ನಮೂದು ಆಗಿರುತ್ತದೆ ಎಂದರೆ ಸರಿಯಲ್ಲ. ದುಂಡಪ್ಪಾ ಆಸ್ತಿ ನಂ. 254, ಖನಗಾಂವ ದಲ್ಲಿ ಮನೆ ಖರೀದಿಸಿದ್ದನು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಇಂಜಿನಿಯರ ಅಂದರೆ ಸರಿ. 2 ನೇ ಪ್ರತಿವಾದಿ ತನ್ನ ಕೆಲಸದಿಂದ ಬಂದ ಆದಾಯದಿಂದ ದಾವಾ ಆಸ್ತಿಯನ್ನು ಅಭಿವೃದ್ಧಿ ಪಡಿಸಿದ್ದಾನೆಂದರೆ ಸರಿಯಲ್ಲ. ನನ್ನ ಗಂಡ ಈ ಕೇಸಿನ ವಾದಿ ಎ.ಸಿ. ಕಚೇರಿಯಲ್ಲಿ ಕೇಸು ದಾಖಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಕೇಸು ವಜಾ ಆಗಿರುತ್ತದೆ ಎಂದರೆ ಸರಿಯಲ್ಲ.

2 ನೇ ಪ್ರತಿವಾದಿಯವರು ಮನೆ ಆಸ್ತಿ ನಂ. 254 ಖರೀದಿಸಿದ್ದರು, ಅದಕ್ಕೆ ಗಂಗಪ್ಪಾ ಹಮಿನಿ ಅವರು ನಮ್ಮ ಸಂಬಂಧಿಕರಾಗಿದ್ದರಿಂದ 2 ನೇ ಪ್ರತಿವಾದಿಗೆ ತೊಂದರೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತ್ರಾಸು ಕೊಡಲು ಈ ದಾವೆ ಹೂಡಿದ್ದೇನೆಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನಮಗೆ ಯಾವುದೇ ಪಾಲು ಬರುವುದಿಲ್ಲ ಮತ್ತು ಹಕ್ಕು ಇಲ್ಲ ಎಂದರೆ ಸರಿಯಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ವೀರೇಶ ಕುಮಾರ ಸಿ. ಕೆ.)
ಹೆ.ದಿ.&ನ್ಯಾದಂ., ಗೋಕಾಕ.